ದಿನಾಂಕ **:03.02.2025** ರಂದು ಪಿಡಬ್ಲ್ಯೂ - 1 ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

<u>ಪಾಟೀ ಸವಾಲುಃ</u> ಶ್ರೀ ಎಂ.ಕೆ.ವಿ.ಕೆ. 1 ನೇ ಪ್ರತಿವಾದಿ ಪರ ವಕೀಲರಿಂದಃ

ಈಗ ನನಗೆ ತೋರಿಸಿದ ಕ್ರಯ ಪತ್ರ ನಿಪಿ- 1 ನ್ನು ನೋಡುತ್ತಿದ್ದು, ಸದರಿ ಕ್ರಯ ಪತ್ರ ಸರಿ ಇರುತ್ತದೆ. ಆದರೆ ಅದರಲ್ಲಿ ಹಿಂದಿನ ದಾರಿಯ ಬಗ್ಗೆ ನನಗೆ ಮಾಹಿತಿ ಇರಲಿಲ್ಲ. ಅದನ್ನು ನನ್ನ ಭಾವ ಮಾಡಿಸಿದ್ದಾರೆ ಆದರೆ ನಾನು ಕ್ರಯ ಪತ್ರಕ್ಕೆ ಸಹಿ ಮಾಡಿರುತ್ತೇನೆ. ಈ ದಾವೆಯಲ್ಲಿನ 2 ನೇ ಪ್ರತಿವಾದಿ ಯಾದಂತಹ ನನ್ನ ಸಹೋದರಿಯು ಸಹ ಅದೇ ದಿನ ಉಳಿದ 50 ಸೆಂಟ್ಸ್ ಸ್ವತ್ತನ್ನು ನೋಂದಣಿ ಕ್ರಯ ಚೀಟಿ ಮಾಡಿಕೊಂಡಿದ್ದಾರೆ ಎಂದರೆ ಸರಿ. 2 ಕ್ರಯ ಪತ್ರಗಳು ಆಗುವ ಸಂದರ್ಭದಲ್ಲಿ ನಾನು ಹಾಜರಿದ್ದೆ. ನಾವುಗಳು ಕ್ರಯ ಪತ್ರವನ್ನು 1 ನೇ ಪ್ರತಿವಾದಿಯ ಸಹೋದರ ಮತ್ತು ಅವರ ಹೆಂಡತಿಯಿಂದ ಖರೀದಿಸಿದ್ದೇನೆ ಎಂದರೆ ಸರಿ. 1 ನೇ ಪ್ರತಿವಾದಿಯ ಸಹೋದರ ಮರಣ ಹೊಂದಿದ್ದಾರೆ. ಸದರಿ ಸ್ವತ್ತನ್ನು 1989 ರಲ್ಲಿ 1 ನೇ ಪ್ರತಿವಾದಿಯಿಂದ ಅವರ ಸಹೋದರ ಖರೀದಿಸಿದ್ದರು ಎಂದರೆ ಸರಿ. ನಿಪಿ- 1 ಕ್ರಯ ಪತ್ರ ಆಗುವ ಪೂರ್ವದಲ್ಲಿ ಮತ್ತು 2 ನೇ ಪ್ರತಿವಾದಿಗೆ ಕ್ರಯ ಪತ್ರ ಆಗುವ ಪೂರ್ವದಲ್ಲಿ ಫ್ರಾನ್ಸಸ್ ಅವರು ಮರಣ ಹೊಂದಿದ ನಂತರ ಹೆಂಡತಿ ಮತ್ತು ಮಕ್ಕಳಿಗೆ ಬಂದತಹ ಸ್ವತ್ತಾಗಿರುತ್ತದೆ. ನಿಪಿ- 1

ಕ್ರಯ ಪತ್ರ ಆಗುವ ಪೂರ್ವದಲ್ಲಿ ಫ್ರಾನ್ಸಸ್ ರವರ ಹೆಂಡತಿ ಮತ್ತು ಮಕ್ಕಳಿಗೆ ಮತ್ತು ಪೂರ್ವದಲ್ಲಿ ಹೇಗೆ ಸ್ವತ್ತು ಬಂದಿರುತ್ತದೆ ಎಂದು ಆಸ್ತಿಯ ದಾಖಲೆಗಳನ್ನು ಪರೀಶಿಲಿಸಿ ನಂತರ ಕ್ರಯ ಚೀಟಿ ಮಾಡಿಕೊಂಡಿರುತ್ತೇವೆ. ಈ ದಾವೆ ಸಲ್ಲಿಸಲು ನನ್ನ ಭಾವ ಮರತಪ್ಪ ರವರೆ ಕಾರಣ ಎಂದರೆ ಸರಿ.

ನಾನು ಕಮೀಷನ್‌ರ್‌ರವರು ಸಲ್ಲಿಸಿದ ವರದಿ ಮತ್ತು ನಕ್ಷೆಯನ್ನು ನೋಡಿದ್ದೇನೆ. ಸರ್ವೆ ನಂ. 254/2 ರಲ್ಲಿ ನನಗೆ ಮಾರಾಟ ಮಾಡಿರುವ ಸ್ವತ್ತನ್ನು ಸರ್ವೆ ನಂ. 254/2 ಪಿ 2 ಮತ್ತು ನನ್ನ ಸಹೋದರಿಗೆ ಮಾರಾಟ ಮಾಡಿದ ಸ್ವತ್ತನ್ನು ಸರ್ವೆ ನಂ. 254/2 ಪಿ 3 ಎಂದು ವಿಭಾಗಿಸಲಾಗಿದೆ ಎಂದರೆ ಸರಿ. ನನಗೆ ಮತ್ತು ನನ್ನ ಸಹೋದರಿಗೆ ಮಾರಾಟ ಮಾಡಿದ ಸ್ವತ್ತನ್ನು ಉಳಿದು, ಬಾಕಿ ಸ್ವತ್ತನ್ನು ಫ್ರಾನ್ಸಸ್ ರವರ ಹೆಂಡತಿ ಉಳಿಸಿಕೊಂಡಿದ್ದು, ಅದನ್ನು ಸರ್ವೆ ನಂ. 254/2 ಪಿ 1 ಎಂದು ನಮೂದಿಸಲಾಗಿದೆ ಎಂದರೆ ಸರಿ. ಈಗ ನಮಗೆ ಮಾರಾಟ ಮಾಡಿದ 254/2 ಪಿ 2 ಸ್ವತ್ತು 254/5 ಎಂದು ಬದಲಾಯಿಸಲಾಗಿದೆ ಎಂದರೆ ಸರಿ. ನನ್ನ ಸಹೋದರಿಗೆ ಮಾರಾಟ ಮಾಡಿದ ಸರ್ವೆ ನಂ. 254/2 ಪಿ 3 ಈಗ ಸ್ವತ್ತು 254/8 ಎಂದು ಬದಲಾಯಿಸಲಾಗಿದೆ ಎಂದರೆ ಸರಿ. ಸರ್ವೆ ನಂ. 254/2 ಪಿ 1 ಸ್ವತ್ತು ಈಗ 254/2 ಎಂದು ಕಾಣಿಸಲಾಗಿದೆ ಎಂದರೆ ಸರಿ. ಕಮೀಷನರವರು ಸಲ್ಲಿಸಿದ ವರದಿ ಮತ್ತು ನಕ್ಷೆಯಲ್ಲಿ ನೂತನ ಸರ್ವೆ ನಂಬರ್ ಗಳನ್ನು ಕಾಣಿಸಲಾಗಿದೆ ಎಂದರೆ ಸರಿ. ನಮಗೆ ಮಾರಾಟ ಮಾಡಿದ ಉಳಿದಂತಹ ಜಾಗಕ್ಕೆ 1 ನೇ ಪ್ರತಿವಾದಿಯು ಕಲ್ಲಿನ ಕಂಬ ಮತ್ತು ತಂತಿ ಬೇಲಿ ಹಾಕಿದ್ದಾರೆ ಎಂದರೆ ಸರಿಯಲ್ಲ. ಯಾವುದೇ ತಂತಿ

ಬೇಲಿ ಇರುವುದಿಲ್ಲ. ನಮ್ಮ ಸ್ವತ್ತಿನ ಪಶ್ಚಿಮ ದಿಕ್ಕಿನಲ್ಲಿ 1 ನೇ ಪ್ರತಿವಾದಿ ಹಾಕಿದ್ದಂತಹ ಕಲ್ಲಿನ ಕಂಬ ಮತ್ತು ಬೇಲಿಯನ್ನು ತೆಗೆದು ನಾನು ರಸ್ತೆ ಮಾಡಲು ಪ್ರಯತ್ನ ಪಟ್ಟಿದ್ದೇವೆ ಎಂದರೆ ಸರಿಯಲ್ಲ. ಅದರಂತೆ 1 ನೇ ಪ್ರತಿವಾದಿಯು ಶಿರ್ವಾ ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿದ್ದಾರೆ ಎಂದರೆ ಸರಿಯಲ್ಲ. ನಾನು ಮನೆ ಕಟ್ಟುವ ಸಮಯದಲ್ಲಿ ಮನೆಗೆ ಲೈಸನ್ಸ್ ಪಡೆದಿದ್ದೇನೆ ಎಂದರೆ ಸರಿ. ಅದನ್ನು ನನ್ನ ಭಾವ ಕೊಡಿಸಿದ್ದಾರೆ ಎಂದು ನುಡಿಯುತ್ತೆನೆ. ಸದರಿ ಲೈಸೆನ್ಸನ್ನು ಹಾಜರುಪಡಿಸಿದರೆ ಯಾವಾಗ ಅದನ್ನು ಪಡೆದಿರುತ್ತೇವೆ ಎಂದು ತಿಳಿಯುತ್ತದೆ ಎಂದರೆ ಸರಿ. ಕಟ್ಟೋಣ ವನ್ನು ಕಟ್ಟಿದ ನಂತರ ಅದರ ಪೂರ್ಣತ ಪ್ರಮಾಣಪತ್ರವನ್ನು ನೀಡಿದ್ದೀರಾ ಎಂದರೆ ನಾನು ನೀಡಿರುವುದಿಲ್ಲ. ನನ್ನ ಭಾವ ನೀಡಿದ್ದಾರೋ ಇಲ್ಲವೊ ನನಗೆ ಗೊತ್ತಿಲ್ಲ. ಈ ದಾವೆ ಮಾಡುವ ಪೂರ್ವದಲ್ಲಿ ಸ್ವತ್ತನ್ನು ಅಳತೆ ಮಾಡಲು ಅರ್ಜಿ ನೀಡಿರುವುದಿಲ್ಲ.

1 ನೇ ಪ್ರತಿವಾದಿ ಅಕ್ರಮ ಬೇಲಿ ಹಾಕುತ್ತಿದದ್ದಿರೆ ಮತ್ತು ನನ್ನ ರಸ್ತೆಗೆ ಅಡ್ಡ ಮಾಡುವ ಸಂಭವ ಇದೆ ಎಂದು ನಾನು ಪೋಲೀಸರಿಗೆ ದೂರು ನೀಡಿರುವುದಿಲ್ಲ. ಆದರೆ ಸರ್ವೆ ಇಲಾಖೆಯವರಿಗೆ ತಿಳಿಸಿದ್ದೇವೆ. ಈ ದಾವೆ ಮಾಡುವ ಪೂರ್ವದಲ್ಲಿಯೇ ಸರ್ವೆ ಇಲಾಖೆಯವರಿಗೆ ತಿಳಿಸಿದ್ದೇವೆ. ಈ ದಾವೆ ಸಲ್ಲಿಸಿದ ನಂತರ ನಾವು ಸರ್ವೆ ಇಲಾಖೆಯವರಿಗೆ ಅರ್ಜಿ ನೀಡಿದ್ದೇವೆ ಎಂದರೆ ಸರಿಯಲ್ಲ.

ನಾನು ಕ್ರಯಕ್ಕೆ ಪಡೆದಂತಹ ಕ್ರಯ ಪತ್ರದಲ್ಲಿ ನನಗೆ ನಿಗದಿ ಪಡಿಸಿರುವಂತಹ ರಸ್ತೆಯನ್ನು ದಿಕ್ಕನ್ನು ಬದಲಾಯಿಸಿ ಬೇರೆ ರಸ್ತೆ ಮಾಡಲು ನಾನು ಪ್ರಯತ್ನಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಕ್ರಯಕ್ಕೆ ಪಡೆದಂತಹ ಕ್ರಯ ಪತ್ರದಲ್ಲಿ ನನಗೆ ನಿಗದಿ ಪಡಿಸಿರುವಂತಹ ರಸ್ತೆಯಲ್ಲಿ ಮತ್ತು ನನ್ನ ಸಹೋದರಿಯ ಕ್ರಯ ಪತ್ರದಲ್ಲಿ ಕಾಣಿಸಿದ ನಿಗದಿಪಡಿಸಿದ ರಸ್ತೆಯಲ್ಲಿ ಶೌಚಾಲಯದ ಹೊಂಡ ತೋಡಿಸಿದ್ದೇವೆ ಎಂದರೆ ಸರಿಯಲ್ಲ. ನನ್ನ ಮತ್ತು ನನ್ನ ಸಹೋದರಿಯ ಸ್ವತ್ತು ಖಾಲಿ ಜಾಗವಿತ್ತು. ನನ್ನ ಸಹೋದರಿ ಅಂದರೆ 2 ನೇ ಪ್ರತಿವಾದಿ ಖರೀದಿಸಿದ ಸ್ವತ್ತು ಈಗ ಖಾಲಿ ಇದೆ. ನನ್ನ ಭಾವ 3 ನೇ ಪ್ರತಿವಾದಿಗೆ ನಾನು ಅಥವಾ ನನ್ನ ಸಹೋದರಿ ಮತ್ತು 1 ನೇ ಪ್ರತಿವಾದಿಗೆ ಇರುವಂತಹ ಸ್ವತ್ತಗಳಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿ. ನಾನು ಕಟ್ಟಡ ಕಟ್ಟುವವರೆಗೆ ಕ್ರಯ ಪತ್ರದಲ್ಲಿ ನಿಗದಿಪಡಿಸಿದಂತಹ ರಸ್ತೆಯನ್ನು ನಾನು ಉಪಯೋಗಿಸುತ್ತಿದ್ದೆ ಎಂದರೆ ಸರಿಯಲ್ಲ. ನ್ಯಾಯಾಲಯದಿಂದ ಏಕತರ್ಫಿ ಆದೇಶ ಪಡೆದ ನಂತರ ರಸ್ತೆಯನ್ನು ಮಧ್ಯ ಭಾಗಕ್ಕೆ ಬದಲಾಯಿಸಿದ್ದೇವೆ ಎಂದರೆ ಸರಿಯಲ್ಲ.

ನಾನು, 2 ಮತ್ತು 3 ನೇ ಪ್ರತಿವಾದಿಯರು ಸೇರಿ 1 ನೇ ಪ್ರತಿವಾದಿಗೆ ತೊಂದರೆ ಕೊಡಲು ಮತ್ತು ನಷ್ಟ ಉಂಟುಮಾಡಲು ಈ ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಏಕತರ್ಫಿ ಆದೇಶ ಪಡೆಯುವ ಸಮಯದಲ್ಲಿ ಉದ್ದೇಶ ಪೂರ್ವಕವಾಗಿ ನ್ಯಾಯಾಲಯದ ಆಯುಕ್ತರನ್ನು ನೇಮಕ ಮಾಡಿಸಿರುವುದಿಲ್ಲ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿಯ ಸಹೋದರ ಫ್ರಾನ್ಸಸ್ ಮುಂಬೈಯಲ್ಲಿ ಇದ್ದರು ಎಂದರೆ ಸರಿ. ಅವರ ಹೆಂಡತಿ ಮತ್ತು ಮಕ್ಕಳು ಸಹ ಮುಂಬೈನಲ್ಲಿದ್ದರು. ಅವರ ಹುಟ್ಟುರು ರಂಗನಪಾಳ್ಯ. 1 ನೇ ಪ್ರತಿವಾದಿ ಅವರ ಸಹೋದರನಿಗೆ ಮತ್ತು ಹೆಂಡತಿ ಮಕ್ಕಳಿಗೆ ಮಾರಾಟ ಮಾಡಿದ ಸ್ವತ್ತಿನಲ್ಲಿ ಪಶ್ಚಿಮ ದಿಕ್ಕಿನಲ್ಲಿ ದಾರಿ ನಿಗದಿಪಡಿಸಲಾಗಿರುತ್ತದೆ. ಸದರಿ ಕ್ರಯ ಚೀಟಿಯಲ್ಲಿ ನಮೂದಿಸಿರುವ ದಾರಿಯನ್ನು ಬಿಟ್ಟು, 1 ನೇ ಪ್ರತಿವಾದಿಯ ಸಹೋದರನಿಗೆ ಮತ್ತು ಹೆಂಡತಿ ಮಕ್ಕಳಿಗೆ ನಮ್ಮ ಸ್ವತ್ತಿನಲ್ಲಿ ಬೇರೆ ರಸ್ತೆಯನ್ನು ನಿಗದಿಪಡಿಸಲು ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ಮೂಲತಹ ಸರ್ಕಾರದಿಂದ ಬಂದಂತಹ ಸ್ವತ್ತು ಎಂದರೆ ನನಗೆ ಗೊತ್ತಿಲ್ಲ. ಅದರ ಬಗ್ಗೆ ನಮ್ಮ ವಕೀಲರಿಗೆ ನಾನು ಮಾಹಿತಿ ನೀಡಿರುವುದಿಲ್ಲ. 1 ನೇ ಪ್ರತಿವಾದಿಯು ಸದರಿ ಸ್ವತ್ತನ್ನು ಯಾರಿಂದ ಕ್ರಯಕ್ಕೆ ಪಡೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಾನು ಹಕ್ಕು ಕೇಳುತ್ತಿರುವುದು ನಾನು ಕ್ರಯಕ್ಕೆ ಪಡೆದಂತಹ 50 ಸೆಂಟ್ಸ್ ಸ್ವತ್ತಿನಲ್ಲಿ ಮಾತ್ರ ಎಂದರೆ ಸರಿ. ಮುದುವರೆದು ದಾರಿಯಲ್ಲೂ ಸಹ ಕೇಳಿರುತ್ತೇನೆ. ನನ್ನ ಕ್ರಯ ಚೀಟಿ ಆಗುವಾಗ 1 ನೇ ಪ್ರತಿವಾದಿ ಇರಲಿಲ್ಲ. ನನ್ನ ಕ್ರಯ ಚೀಟಿಯಲ್ಲಿ ಇರುವ ದಾರಿಯ ಹಕ್ಕಿನ ಬಗ್ಗೆ 1 ನೇ ಪ್ರತಿವಾದಿ ಸಹಿ ಹಾಕಿರಲಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿದಂತಹ ಸಮಯಲ್ಲಿ ಮನೆಯನ್ನು ಕಟ್ಟಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪರವಾನಿಗೆ ಮತ್ತ ಇತರ ದಾಖಲೆಯನ್ನು ಹಾಜರುಪಡಿಸಿದಲ್ಲಿ ನಾನು ಯಾವಾಗ ಮನೆ ಕಟ್ಟಿಸಿದ್ದೇನೆ ಎಂದು ತಿಳಿಯುತ್ತದೆ ಎನ್ನುವ ಉದ್ದೇಶಕ್ಕಾಗಿ ನಾನು ಸದರಿ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ದಾವೆ ಸಲ್ಲಿಸಿದ ನಂತರ ನಾನು ದೂರನ್ನು ನೀಡಿ ಪೋಲೀಸರನ್ನು ಸ್ಥಳಕ್ಕೆ ಕರೆದುಕೊಂಡು ಬಂದಿರುವುದಿಲ್ಲ. ನಮ್ಮ ಸ್ವತ್ತಿನ ಪಶ್ಚಿಮ ದಿಕ್ಕಿನಲ್ಲಿ ಇರುವಂತಹ ಪಳ್ಳಿಬೆಟ್ಟು ರಸ್ತೆಯ ನನ್ನ ಸ್ವತ್ತಿನಿಂದ ಸುಮಾರು 7 - 8 ಅಡಿ ದೂರದಲ್ಲಿರುತ್ತದೆ. ನಿಪಿ - 7 ಫೋಟೊದಲ್ಲಿ ನನ್ನ ಮನೆ ಮತ್ತು ನಾನು ಕೇಳುತ್ತಿರುವ ರಸ್ತೆ ಇರುತ್ತದೆ. ಅದರಲ್ಲಿ ಕಾಣುವ ಕಲ್ಲು ಕಂಬ ನಾನು ಸ್ವತ್ತನ್ನು ಕ್ರಯಕ್ಕೆ ಪಡೆಯುವ ಪೂರ್ವದಲ್ಲಿ ಇರುತ್ತದೆ. ನಾನು ಮತ್ತು ನನ್ನ ಸಹೋದರಿ ಕ್ರಯಕ್ಕೆ ಪಡೆದ ಸ್ವತ್ತಿನ ಸುತ್ತಲೂ ಸದರಿ ಕಲ್ಲು ಕಂಬಗಳು ಇರುತ್ತದೆ. ನಿಪಿ 7 ಮೂರನೇ ಫೋಟೋದಲ್ಲಿ ಕಾಣುವ ಕಲ್ಲು ಕಂಬ ಮತ್ತು ಬೇಲಿ ನಮ್ಮ ಸ್ವತ್ತಿನಲ್ಲಿತ್ತು. ಈಗ 03.112018 ರಲ್ಲಿ ಸದರಿ ಬೇಲಿ ಮತ್ತು ಕಲ್ಲು ಕಂಬವನ್ನು ಕಿತ್ತು ಹಾಕಿರುತ್ತಾರೆ. ನಿಪಿ 7 ರ 6 ನೇ ಫೋಟೊದಲ್ಲಿ ಕಾಣುವ ಡಾಂಬಾರು ರಸ್ತೆ ಮಲ್ಲಿಬೆಟ್ಟು ರಸ್ತೆ ಆಗಿರುತ್ತದೆ. ಸದರಿ ಮಲ್ಲಿಬೆಟ್ಟು ರಸ್ತೆ ನಮ್ಮ ಸ್ವತ್ತಿನಿಂದ ಹೋಗುವ ರಸ್ತೆಯ ಬಗ್ಗೆ ಈ ದಾವೆಯಲ್ಲಿ ವಿವಾದ ಇರುತ್ತದೆ. ನಿಪಿ - 7 ರ 7 ನೇ ಫೋಟೋದಲ್ಲಿ ಕಾಣುವ ಮಣ್ಣು ರಸ್ತೆ ನನ್ನ ಸ್ಥಳದಲ್ಲಿದೆ. ನಿಪಿ 7 ರ 7 ನೇ ಫೊಟೋದಲ್ಲಿ ಕಾಣುವ ಕಾಂಪೌಂಡ ಗೋಡೆ ಯಾಶೋದಾ ನಾಯ್ಕರವರಿಗೆ ಸೇರಿರುತ್ತದೆ. ಸದರಿ ಫೋಟೋದಲ್ಲಿ ಮಲ್ಲಿಬೆಟ್ಟು ರಸ್ತೆ ಕಾಣಿಸುವುದಿಲ್ಲ. ಆದರೆ ಸದರಿ ಕಾಂಪೌಂಡ್ ಗೋಡೆ ಮತ್ತು ನಮ್ಮ ರಸ್ತೆಯ ಮಧ್ಯದಲ್ಲಿ ಮಲ್ಲಿಬೆಟ್ಟು ರಸ್ತೆ ಕಾಣುತ್ತದೆ.

ನಿಪಿ - 7 ರ ಫೋಟೋಗಳನ್ನು ನಾನು ತೆಗೆದಿರುವುದಿಲ್ಲ. ಅದನ್ನು ಯಾರು ತೆಗೆದಿದ್ದು ಎಂದು ನನಗೆ ತಿಳಿದಿಲ್ಲ. ಅದನ್ನು ಹಾಜರುಪಡಿಸಲು

ವಕೀಲರಿಗೆ ನೀಡಿದ್ದೇನೆ. ಸದರಿ ಫೋಟೋಗಳನ್ನು ವಕೀಲರಿಗೆ ನೀಡಲು ನನ್ನ ಭಾವ ಮರತಪ್ಪರವರು ನನಗೆ ಕೊಟ್ಟಿರುತ್ತಾರೆ ಎಂದರೆ ಸರಿ. ನಿಪಿ 2 ರ 1 ನೇ ಫೋಟೋದಲ್ಲಿ ಕಾಣುತ್ತಿರುವುದು ನಾನು ಹೊಸದಾಗಿ ಮಾಡಿಕೊಂಡ ಮಣ್ಣು ರಸ್ತೆ ಎಂದರೆ ಸರಿಯಲ್ಲ. ಅದರಲ್ಲಿ ಕಾಣುತ್ತಿರುವ ಮನೆ ನನ್ನದಾಗಿರುತ್ತದೆ. ನಿಪಿ 2 ರ 2 ನೇ ಫೋಟೋದಲ್ಲಿ ಕಾಣುತ್ತಿರುವುದು ನನ್ನ ಮನೆ ಮತ್ತು ಮಲ್ಲಿಬೆಟ್ಟು ರಸ್ತೆಯಾಗಿರುತ್ತದೆ. ನಿಪಿ 2 ರ 5 ನೇ ಫೋಟೋದಲ್ಲಿ ಕಾಣುತ್ತಿರುವುದು ನಮ್ಮ ಮನೆಯ ಶೌಚಾಲಯದ ಹೊಂಡ ಇರುವ ಫೋಟೊ ಎಂದರೆ ಸರಿ. ನಿಪಿ 2 ರ 4 ನೇ ಫೋಟೋದಲ್ಲಿ ಕಾಣುತ್ತಿರುವ ಕಾಂಪೌಂಡ್ ಗೋಡೆ 1 ನೇ ಪ್ರತಿವಾದಿಯರದ್ದಾಗಿದ್ದು, ಅದರ ಹೋರಗಿರುವ ಸ್ವತ್ತು ನನ್ನದಾಗಿರುತ್ತದೆ. ನನ್ನ ಸ್ವತ್ತಿನಿಂದ 2 ನೇ ಪ್ರತಿವಾದಿಯು ಸ್ವತ್ತಿಗೆ ಹೋಗಬೇಕಾದಲ್ಲಿ ಶೌಚಾಲಯದ ಹೊಂಡ ಇರುವ ಸ್ಥಳ ದಿಂದ ಹೋಗಬೇಕು. ಶೌಚಾಲಯದ ಹೊಂಡವುಹಿ ನಮ್ಮ ಮನೆಯ ದಕ್ಷಿಣ ದಿಕ್ಕಿನಲ್ಲಿದೆ. ನಮ್ಮ ಮನೆಯ ಉತ್ತರ ದಿಕ್ಕಿನಲ್ಲಿ ಒಂದು ಬಾವಿ ತೋಡಿದ್ದೇನೆ. ಸದರಿ ಬಾವಿಯನ್ನು ಈ ದಾವೆ ಸಲ್ಲಿಸಿದ ನಂತರ ತೋಡಿದ್ದೇವೆ ಎಂದರೆ ಸರಿಯಲ್ಲ. ಮೊದಲೆ ತೋಡಿದ್ದೇವೆ. ವಾದಿಯ ಕಾಂಪೌಂಡ್ ಗೋಡಯ ಕೆಳಗೆ ಕಲ್ಲು ಕಂಬ ಮತ್ತು ತಂತಿ ಬೇಲಿ ಇರುತ್ತದೆ ಎಂದರೆ ಸರಿ. ಸದರಿ ಕಲ್ಲು ಕಂಬ ಮತ್ತು ತಂತಿ ಬೇಲಿ ನಮ್ಮದಾಗಿರುತ್ತದೆ. ನಮ್ಮ 50 ಸೆಂಟ್ಸ್ ಸ್ವತ್ತನ್ನು ದಾಟಂದೇ 2 ನೇ ಪ್ರತಿವಾದಿಯ ಸ್ಥಳಕ್ಕೆ ಹೋಗಲು ದಾರಿ ಇರುವುದಿಲ್ಲ. ನಮ್ಮ ಮತ್ತು ನನ್ನ ಸಹೋದರಿಯ ಕ್ರಯ ಪತ್ರಗಳಲ್ಲಿ ಇಬ್ಬರಿಗೂ ಒಂದೇ ರಸ್ತೆಯನ್ನು ಕಾದಿರಸಲಾಗಿದೆ ಎಂದರೆ ಸರಿ.

ಆದರೆ ನನ್ನ ಗಮನಕ್ಕೆ ಇರಲಿಲ್ಲ. ನಮ್ಮ ಭಾವ ಮಾಡಿರುತ್ತಾರೆ. ನನ್ನ ಭಾವ ಮರತಪ್ಪ ನಾಯ್ಕರವರೇ ಕ್ರಯ ಪತ್ರಗಳನ್ನು ಮತ್ತು ಎಲ್ಲಾ ವ್ಯವಹಾರವನ್ನು ಮಾಡಿದ್ದು, ಎಂದು ನಮ್ಮ ವಕೀಲರಿಗೆ ಮಾಹಿತಿ ನೀಡಿದ್ದೇನೆ. ನಮ್ಮ ವಕೀಲರಿಗೆ ತಪ್ಪು ಮಾಹಿತಿಯನ್ನು ಕೊಟ್ಟು, ಸತ್ಯ ವಿಚಾರಗಳನ್ನು ತಿಳಿಸದೇ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಕ್ರಯ ಚೀಟಿಗಳಾಗಿದ್ದು, ಸದರಿ ಕ್ರಯ ಚೀಟಿಗಳಲ್ಲಿ, ದಾವಾ ಸ್ವತ್ತಿನ ಮಧ್ಯ ಭಾಗದಲ್ಲಿ ರಸ್ತೆಗಳನ್ನು ನಿಗದಿ ಪಡಿಸಲಾಗಿಲ್ಲ ಎಂದರೆ ಸರಿ. ನಮ್ಮ ಸ್ವತ್ತಿನ ದಕ್ಷಿಣ ಭಾಗದಲ್ಲಿ ರಸ್ತೆಗಳನ್ನು ನಗದಿಪಡಿಸಲಾಗಿದೆ ಎಂದರೆ ಸರಿ. ಸದರಿ ವಿಚಾರವು ನಮಗೆ ದಾವೆ ಮಾಡುವ ಸಮಯದಲ್ಲಿ ತಿಳಿದಿರುತ್ತದೆ. ದಾವೆ ಮಾಡುವಾಗ ಗೊತ್ತಾಗಿದ್ದು, ಪೋಲೀಸರು ಬಂದಾಗ ಮತ್ತು ಸರ್ವೆ ಮಾಡುವಾಗ ದಾಖಲೆಗಳನ್ನು ತೆಗೆದಸಿದಾಗ ಈ ವಿಚಾರ ತಿಳಿದಿರುತ್ತದೆ. ಪೋಲೀಸರು ದಾವೆ ಸಲ್ಲಿಸುವ ಪೂರ್ವದಲ್ಲಿ ಬಂದಿರುತ್ತಾರೆ. ಈ ವಿಚಾರವನ್ನು ನಮ್ಮ ವಕೀಲರಲ್ಲಿ ದಾವೆ ತಯಾರಿಸುವ ಸಮಯಲ್ಲಿ ತಿಳಿಸಿದ್ದೇನೆ. ಕ್ರಯ ಚೀಟಿಗಳಲ್ಲಿ ನನ್ನ ಮತ್ತು ನನ್ನ ಸಹೋದರಿಗೆ ನಿಗದಿಪಡಿಸಲಾದ ರಸ್ತೆಯ ಸರಿಯಾಗಿ ನಿಗದಿಪಡಿಸಿಲ್ಲ ಎಂದು ನಾನು ವಕೀಲರಿಗೆ ತಿಳಿಸಿದ್ದೇನೆ. ಸದರಿ ಕ್ರಯ ಚೀಟಿಗಳಲ್ಲಿ ಆಗಿರುವಂತಹ ತಪ್ಪುಗಳನ್ನು ತಿದ್ದುಪಡಿ ಮಾಡುವ ಅಧಿಕಾರ ಮತ್ತು ಜವಾಬ್ದಾರಿ ಅದನ್ನು ಕ್ರಯಕ್ಕೆ ನೀಡಿದವರಿಗೆ ಇರುತ್ತದೆ ಎಂದು ನಮ್ಮ ವಕೀಲರಿಗೆ ತಿಳಿಸಿರಬಹುದು. ನಮಗೆ ಕ್ರಯಕ್ಕೆ ಸ್ವತ್ತು ನೀಡಿದಂತಹ ಫ್ರಾನ್ಸಸ್ ರವರ ಹೆಂಡತಿ ಮತ್ತು ಮಕ್ಕಳನ್ನು ಈ ವಿಚಾರವಾಗಿ ನಾನು ಸಂಪರ್ಕಿಸಿರುವುದಿಲ್ಲ. ಕ್ರಯ ಚೀಟಿಗಳಲ್ಲಿ ರಸ್ತೆಯನ್ನು

ನಿಗದಿಪಡಿಸಬೇಕು ಎಂದು ನಿವೃತ್ತಿಯನ್ನು ಕೇಳುವಂತೆ ನಮ್ಮ ವಕೀಲರಿಗೆ ತಿಳಿಸಿರಬಹುದು. ಮಲ್ಲಿಬೆಟ್ಟು ರಸ್ತೆಗೆ ಹೋಗುವ ರಸ್ತೆಯನ್ನು ದಾವೆಯಾದ ನಂತರ ನಾವು ಮಾಡಿದ್ದೇವೆ ಎಂದರೆ ಸರಿಯಲ್ಲ. ನಾನು ಉತ್ತರ ಪಡುದಿಕ್ಕಿನಲ್ಲಿ ರಸ್ತೆ ಮಾಡಿರುವ ಕಾರಣ, 1 ನೇ ಪ್ರತಿವಾದಿಗೆ ಸೇರಿದಂತಹ 3.42 ಎಕರೆ ಸ್ವತ್ತಿನ್ನು ಉಪಯೋಗಿಸಲು 1 ನೇ ಪ್ರತಿವಾದಿಗೆ ಅಡ್ಡಿ ಪಡಿಸಿ ತೊಂದರೆ ನೀಡುತ್ತಿದೇನೆ ಎಂದರೆ ಸರಿಯಲ್ಲ. ಕಮೀಷನರ್ ರವರು ಬರುವಾಗ ನಾನು ಸರ್ವೆ ನಂ. 254/2 ರಲ್ಲಿ ಮಾಡಿದಂತಹ ರಸ್ತೆಯು ಕಾನೂನು ಬಾಹಿರ ಎಂದರೆ ಸರಿಯಲ್ಲ.

ಪಾಟೀ ಸವಾಲಿಗೆ 2 ಮತ್ತು 3 ನೇ ಪ್ರತಿವಾದಿ ಪರ ವಕೀಲರಿಂದ ಸಮಯವಕಾಶ ಕೇಳಿದ್ದು, ಸಮಾವಕಾಶ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

Sd/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ.,
ಕಾರ್ಕಳ.